**ದಿನಾಂಕ: 06-02-2019 ರಂದು ಶ್ರೀ.ಎಸ್.ಮುನಿಸ್ವಾಮಿ, ಕಾಡುಗುಡಿ ವಾರ್ಡ್ ಸಂಖ್ಯೆ: 83, ಪಾಲಿಕೆ ಸದಸ್ಯರ ಹಾಗೂ ವಾರ್ಡ್ ಸಮಿತಿಯ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಮಟ್ಟದಲ್ಲಿ ನಡೆದ ಸಭೆಯ ನಡವಳಿಗಳು**

**<u>ಹಾಜರಿದ್ದ ಅಧಿಕಾರಿ ಹಾಗೂ ಸಿಬ್ಬಂದಿಗಳು</u>**

1) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ, ವೈಟ್‌ಫೀಲ್ಡ್ ಉಪವಿಭಾಗ
2) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ, ರಸ್ತೆಮೂಲಭೂತ ಸೌಕರ್ಯಗಳ ವಿಭಾಗ, ಮಹದೇವಪುರ
3) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ, ಟಿ.ಇ.ಸಿ -ರಸ್ತೆಮೂಲಭೂತ ಸೌಕರ್ಯಗಳ ವಿಭಾಗ, ಮಹದೇವಪುರ
4) ಸಹಾಯಕ ಅಭಿಯಂತರರು, ಕಾಡುಗುಡಿ ವಾರ್ಡ್ ನಂ.83
5) ಸಹಾಯಕ ಕಂದಾಯ ಅಧಿಕಾರಿಗಳು, ವೈಟ್‌ಫೀಲ್ಡ್ ಉಪವಿಭಾಗ,
6) ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕಾಡುಗುಡಿ
7) ಕಂದಾಯ ಪರಿವೀಕ್ಷಕರು, ಕಾಡುಗುಡಿ ವಾರ್ಡ್ ನಂ.83
8) ಕಂದಾಯ ವಸೂಲಿಗಾರರು, ಕಾಡುಗುಡಿ ವಾರ್ಡ್ ನಂ.83
9) ಹಿರಿಯ ಆರೋಗ್ಯ ನಿರೀಕ್ಷಕರು, ಕಾಡುಗುಡಿ ವಾರ್ಡ್ ನಂ.83
10) ಘನತಾಜ್ಯ ಪರಿವೀಕ್ಷಕರು, ಕಾಡುಗುಡಿ ವಾರ್ಡ್ ನಂ: 83
11) ಎಲ್ಲಾ ಕಾಡುಗುಡಿ ವಾರ್ಡ್ ಕಮಿಟಿ ಸದಸ್ಯರು ಮತ್ತು ಸಾರ್ವಜನಿಕರು
12) ಕಿರಿಯ ಅಭಿಯಂತರರು, ಬೆಸ್ಕಾಂ

**ದಿನಾಂಕ: 06/02/2019, ವಾರ್ಡ್ ಕಛೇರಿಯಲ್ಲಿ ಬೆಳ್ಳಿಗೆ 10.30 ಘಂಟೆಗೆ ಹಾಜರಿದ್ದ ಮಾನ್ಯ ಪಾಲಿಕೆ ಸದಸ್ಯರು ಹಾಗೂ ಕಮಿಟಿ ಸದಸ್ಯರು ಮತ್ತು ಹಾಜರಿದ್ದ ಸಿಬ್ಬಂದಿಯನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

1. ಕಾಡುಗುಡಿ ವಾರ್ಡ್ ನಂ: 83 ರಲ್ಲಿ ಘನತ್ಯಾಜ್ಯ ನಿರ್ವಹಣೆ ಕಾರ್ಯಕ್ಕೆ ಈ ಹಿಂದಿನ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಿರುವಂತೆ ವಾರ್ಡ್‌ನಲ್ಲಿರುವ ಒಟ್ಟು 20471 ಪ್ರತಿ ಮನೆಗಳಿಗೆ 700 ಜನಸಂಖ್ಯೆಗೆ ಪೌರ ಕಾರ್ಮಿಕರನ್ನು ಪ್ರತಿ 750 ಮನೆಗಳಿಗೆ ಒಂದು ಆಟೋ ರಿಕ್ಷ ಟಿಪ್ಪರ್ ರಂತೆ ಹಾಲಿ ನಿರ್ವಹಿಸುತ್ತಿರುವ ಪೌರಕಾರ್ಮಿಕರಾ 29 ಜನ ಪೌರಕಾರ್ಮಿಕರನ್ನು ಮತ್ತು 08 ಆಟೋಗಳು ಮತ್ತು ಒಂದು ಕಾಂಪ್ಯಾಕ್ಟರನ್ನು ನಿಯೋಜಿಸಿಕೊಳ್ಳುವ ಬಗ್ಗೆ ಪ್ರಶ್ನಿಸಲಾಗಿ ಸದರಿ ಕಡತವು ಅನುಮೋದನೆ ನೀಡಲು ಕೇಂದ್ರ ಕಛೇರಿಗೆ ರವಾನೆಯಾಗಿರುವುದಾಗಿ ಆರೋಗ್ಯ ನಿರೀಕ್ಷಕರು,(ಘ.ತ್ಯಾ.ನಿ) ಸಭೆಗೆ ತಿಳಿಸಿದರು, ಮುಂದುವರೆದು ಹಸಿ ಕಸ ಮತ್ತು ಒಣ ಕಸವನ್ನು ಬೇರ್ಪಡಿಸಲು ವೈಜ್ಞಾನಿಕವಾಗಿ ವಿಧಾನಗಳನ್ನು ಅಳವಡಿಸಿಕೊಂಡು ಕ್ರಮ ಜರುಗಿಸಲು ನಿರ್ಣಹಿಲಾಯಿತು.
   ಮುಂದುವರೆದು, ಕಸ ಸಂಗ್ರಹಣೆಗಾಗಿ ಮತ್ತು ಡಿ.ಬ್ಲ್ಯೂ.ಸಿ.ಸಿ ನಿರ್ಮಾಣ ಮಾಡಲು ಸ್ಥಳವಕಾಶವನ್ನು ಚನ್ನಸಂದ್ರ ಗ್ರಾಮದ ಸರ್ವೆ ನಂ.17/2, 18/2, 19/2, 22/1 ರಲ್ಲಿ ಕಾಯ್ದಿರಿಸಲು ಮಾನ್ಯ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರಿಗೆ ಕಡತ ಮಂಡಿಸಲು ಸೂಚಿಸಲಾಯಿತು.

2. ಮಾನ್ಯ ಅಧ್ಯಕ್ಷರು, ಕಾಡುಗುಡಿ ವಾರ್ಡ್ ನಂ: 83 ರಲ್ಲಿ ಎಲ್ಲಾ ಮುಖ್ಯರಸ್ತೆ ಹಾಗೂ ಅಡ್ಡರಸ್ತೆಗಳಲ್ಲಿ ಕಾವೇರಿ ಪೈಪ್‌ಲೈನ್ ಕಾಮಗಾರಿ ಕೆಲಸ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ, ರವರ ಪೈಪ್‌ಲೈನ್ ಕೆಲಸಗಳು ನಡೆಯುತ್ತಿದ್ದು, ಇದರಿಂದಾಗಿ ಎಲ್ಲಾ ಮೇಜರ್ ರಸ್ತೆಗಳಲ್ಲಿ ಹೆಚ್ಚಾಗಿ ಮಣ್ಣು ಮತ್ತು ದೂಳು ಇರುವುದರಿಂದ ಹಾಗೂ ಕಾಡುಗುಡಿ ವಾರ್ಡ್ ನಂ: 83 ರಲ್ಲಿ ಮೆಕ್ಯಾನಿಕಲ್ ಸ್ವೀಪಿಂಗ್ ಮೇಷಿನ್ ವಾಹನವು ಕಾರ್ಯನಿರ್ವಹಿಸುತ್ತಿಲ್ಲವೆಂದು ಈ ಬಗ್ಗೆ ತುರ್ತಾಗಿ ಕಾಡುಗುಡಿ ವಾರ್ಡಿನ ವ್ಯಾಪ್ತಿಯಲ್ಲಿನ ಎಲ್ಲಾ ಮೇಜರ್ ರಸ್ತೆಗಳಲ್ಲಿ ಮೆಕ್ಯಾನಿಕಲ್ ಸ್ವೀಪಿಂಗ್ ಮೆಷಿನ್ ವಾಹನದಿಂದ ರಸ್ತೆಯನ್ನು ಸ್ವಚ್ಚಗೊಳಸಲು ಸ.ಕಾ.ಅ(ಘ.ತ್ಯಾ.ನಿ) ರವರಿಗೆ ನಿರ್ದೇಶಿಸಿದರು

ಕ್ರಮ: ಸ.ಕಾ.ಅ ಘನತ್ಯಾಜ್ಯ ನಿರ್ವಹಣೆ

೩. ಮಾನ್ಯ ಅಧ್ಯಕ್ಷರು ಇತ್ತೀಚೆಗೆ ಮಾಂಸದ ಅಂಗಡಿಗಳ ಮಾಲೀಕರು ಹಾಗೂ ಕೋಳಿ ಅಂಗಡಿ ಮತ್ತು ಮೀನಿನ ಅಂಗಡಿಗಳ ಮಾಲೀಕರುಗಳು ತಮ್ಮ ಅಂಗಡಿಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಏಲ್ಲೇಂದರಲ್ಲಿ ಮೂಟೆ ಮೂಟೆಗಳಲ್ಲಿ ಕಟ್ಟಿಕೊಂಡು ಬಂದು ಅನಧಿಕೃತವಾಗಿ ರಸ್ತೆ ಬದಿಗಳಲ್ಲಿ ಸುರಿಯುತ್ತಿರುತ್ತಾರೆ ಸದರಿ ಅಂಗಡಿಗಳು ನಮ್ಮ ವಾರ್ಡಿನ ಅಕ್ಕ-ಪಕ್ಕದ ವಾರ್ಡ್‌ಗಳಿಂದಲು ರಾತ್ರಿ ವೇಳೆಯಲ್ಲಿ ರಸ್ತೆಯ ಬದಿ ಸುರುಯುತ್ತಿದ್ದು, ಈ ಬಗ್ಗೆ ಕೆ.ಆರ್.ಪುರ ಬಿ.ಬಿ.ಎಂ.ಪಿ ಕಛೇರಿಯ ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಯಿತು.

ಕ್ರಮ: ಸಹಾಯಕ ನಿರ್ದೇಶಕರು, ಪಶುಸಂಗೋಪನೆ ಇಲಾಖೆ, ಕೆ.ಆರ್.ಪುರ

೪. ಕಾಡುಗುಡಿ ವಾರ್ಡಿನಲ್ಲಿ ವಿದ್ಯುತ್ ಕಂಬಗಳಲ್ಲಿ ಬೀದಿ ದೀಪಗಳನ್ನು ದುರಸ್ತಿ ಪಡಿಸಲು ಸಾರ್ವಜನಿಕರಿಂದ ದೂರುಗಳು ಬರುತ್ತಿದ್ದು, ಗುತ್ತಿಗೆದಾರರಿಗೆ ಬೀದಿ ದೀಪಗಳನ್ನು ದುರಸ್ತಿ ಪಡಿಸಿಸಲು ಸೂಚಿಸಲು ತಿಳಿಸಿರುತ್ತಾರೆ.

ಕ್ರಮ: ಸಹಾಯಕ ಅಭಿಯಂತರರು,

೫. ಚನ್ನಸಂದ್ರ ಮತ್ತು ಲಿಂಗಾಯಿತ ರುದ್ರ ಭೂಮಿಗಳಲ್ಲಿ ತ್ಯಾಜ್ಯ ವಸ್ತುಗಳನ್ನು ತೆಗೆದು ದುರಸ್ತಿ ಪಡಿಸಿ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಚರ್ಚಿಸಿ ಕ್ರಮ ಕೈಗೊಳ್ಳಲು ಸೂಚಿಸಿದರು.

ಕ್ರಮ: ಸಹಾಯಕ ಅಭಿಯಂತರರು,

೬. ಕಾಡುಗುಡಿ ವಾರ್ಡ್ ವ್ಯಾಪ್ತಿಯ ಕೆಲವು ಪ್ರದೇಶಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ, ವತಿಯಿಂದ ಒಳಚರಂಡಿ ಮತ್ತು ಕಾವೇರಿ ಕುಡಿಯುವ ನೀರಿಗೆ ಬಿಟ್ಟು ಹೋಗಿರುವ ರಸ್ತೆಗಳಲ್ಲಿ ತುರ್ತಾಗಿ ಕ್ರಮಕೈಗೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚಿಸಿದರು

ಕ್ರಮ: ಸ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ,

೭. ವಾರ್ಡ್ ವ್ಯಾಪ್ತಿಯಲ್ಲಿರುವ ಅಡ್ಡರಸ್ತೆ ಮತ್ತು ಮುಖ್ಯರಸ್ತೆಗಳಲ್ಲಿ ಸುಮಾರು ದಿನಗಳಿಂದ ನಿಲ್ಲಿಸಿರುವ ದ್ವಿಚಕ್ರ ವಾಹನಗಳನ್ನು ತೆಗೆಯಲು ಟ್ರಾಫಿಕ್ ಪೋಲೀಸ್ ರವರಿಗೆ ಪತ್ರ ಒರೆದು ಕ್ರಮ ಕೈಗೊಳ್ಳಲು ಸೂಚಿಸಿದರು,

ಕ್ರಮ: ಸಹಾಯಕ ಅಭಿಯಂತರರು,

೮. ಕಾಡುಗುಡಿಯ ರೈಲ್ವೆ ಬ್ರೀಡ್ಜ್‌ನ ಮೇಲೆ ಹಾಗೂ ಸಮೀಪ ಪಾದಚಾರಿ ವ್ಯಾಪಾರಿಗಳನ್ನು ನಿಯಂತ್ರಿಸಲು / ತೆರವುಗೊಳಿಸಲು ಸೂಚಿಸಿಲಾಯಿತು.

ಕ್ರಮ: ಸಹಾಯಕ ಅಭಿಯಂತರರು,

೯. ಕಾಡುಗುಡಿ ವಾರ್ಡಿನ ಹೋಫರಂ ಜೆಂಕ್ಷನಲ್ಲಿ ವಾಹಣ ದಟ್ಟಣೆಯನ್ನು ಕಡಿಮೆ ಮಾಡಲು ಹಾಲಿ ಇರುವ ಸರ್ಕಾರಿ ಆಸ್ತಿಯನ್ನು ಉಪಯೋಗಿಸಿಕೊಂಡು ತಾತ್ಕಾಲಿಕ ರಸ್ತೆಯನ್ನು ನಿರ್ಮಾಣ ಮಾಡಲು ಸೂಚಿಸಲಾಯಿತು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಟಿ.ಇ.ಸಿ ವಿಭಾಗ ಬಿ.ಬಿ.ಎಂ.ಪಿ

೧೦. ಕಾಡುಗುಡಿ ವಾರ್ಡ್ ವ್ಯಾಪಿಯಲ್ಲಿ ಬರುವ ಕಾಡುಗುಡಿ ಸಂತೆಯಲ್ಲಿ ಬರುವ ಕಸವನ್ನು ಸಂರ್ಪಕವಾಗಿ ಒಂದು ಕಡೆ ಸಂಗ್ರಹ ಮಾಡಿ ಕಸವನ್ನು ಸಾಗಣೆ ಮಾಡಲು ಸೂಚಿಸಲಾಗಿದೆ.

ಕ್ರಮ: ಸಹಾಯಕ ಕಂದಾಯ ಅಧಿಕಾರಿಗಳು, ವೈಟ್‌ಫೀಲ್ಡ್ ಉಪವಿಭಾಗ ಬಿ.ಬಿ.ಎಂ.ಪಿ

| | |
|---|---|
| ಸಹಿ/- | ಸಹಿ/- |
| ಕಾರ್ಯದರ್ಶಿ | ಅಧ್ಯಕ್ಷರು |
| ವಾರ್ಡ್ ನಂ: ೮೩ | ವಾರ್ಡ್ ನಂ: ೮೩, ಕಾಡುಗುಡಿ |
| ಕಾಡುಗುಡಿ | |

**ಪ್ರತಿಯನ್ನು:**

1) ಕೌನ್ಸಿಲ್ ಕಾರ್ಯದರ್ಶಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
2) ಮಾನ್ಯ ಜಂಟಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹದೇವಪುರ ವಲಯ
3) ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ, ಮಹದೇವಪುರ ವಲಯ
4) ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ, ಮಹದೇವಪುರ ವಿಭಾಗ
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ವೈಟ್‌ಫೀಲ್ಡ್ ಉಪವಿಭಾಗ, ಬಿಬಿಎಂಪಿ
6) ಸಹ ಕಂದಾಯ ಅಧಿಕಾರಿಗಳು, ವೈಟ್‌ಫೀಲ್ಡ್ ಉಪವಲಯ, ಬಿಬಿಎಂಪಿ
7) ಸಹ ಕಂದಾಯ ಅಧಿಕಾರಿಗಳು, ಜಾಹಿರಾತು, ಬಿಬಿಎಂಪಿ
8) ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ